## 5

ಅಮ್ಮ ಸಣ್ಣೋನಿದ್ದಾಗ ಹೇಳ್ತಿದ್ಲು. ಮಕ್ಳು ಮಲಗಿದಾಗ ಬಟ್ಟೆ ಬದಲಿಸಬಾರದು, ಮಕಾ ತೊಳಿಬಾರದು... ಜೀವ ದೇಹ ಬಿಟ್ಟು ಹೊರಗೆ ಹೋಗಿ, ಅವತ್ತು ನಾವು ಎಲ್ಲೆಲ್ಲಿ ಅಡ್ಡಾಡಿ ಬಂದಿರ್ತೀವಿ ಅಲ್ಲೆಲ್ಲ ಹೋಗಿ ಬರ್ತತೆ... ಅಷ್ಟರಾಗೆ ನಾವೇನಾರಾ ಪೌಡರ್ ಹಚ್ಚಿ, ಸಿಂಗಾರ ಮಾಡಿ, ಬಟ್ಟೆ ಬದಲಿಸಿದ್ರೆ ಅದು ಮೈನಾಗೆ ಸೇರ್ಕಳಲ್ಲ ಅಂತಾ...

ಅವೊತ್ತು ರಾಜಮ್ಮ ಮಗಳಿಗೆ ಹಂಗೇನಾದ್ರೂ ಮಾಡಿದ್ಲಾ... ತಲೆಗಿಗ್ರನೆ ತಿರುಗತೊಡಗಿತು.

ಬಸ್ಸು ಹೈವೇನಲ್ಲಿ ರೊಯ್ಯನೆ ದಾವಣಗೆರೆಗೆ ಇವನ ತಂದೊಗೆದು ಹೋಯಿತು. ದೀರ್ಘ ನಿಡುಸುಯ್ದು ಎತ್ತ ಹೋಗುವುದು ಏನು ಮಾಡುವುದು ಹೊಳೆಯದೆ ಸಿಗರೇಟು ಸುಡುತ್ತಾ ನಿಂತ. 'ನನ್ನ ಮಗಳಿಗೂ ಹಂಗೇ ಆಯ್ತೇನೋ...' ಅನ್ನುವ ತೀರ್ಮಾನಕ್ಕೆ ಬಂದ. ಎಲ್ಲ ಎಲ್ಲ ತೊಳೆದು ಹೋಗಿ... ಹೊಸ ಬದುಕು ಎದ್ದು ಕಾಣುತ್ತಿದೆ ಎನ್ನುವಷ್ಟರಲ್ಲಿ ಮಗಳ ಜೊತೆಗೆ ಬದುಕೂ ಸತ್ತು ಹೋದ ಕ್ಷಣ ಸ್ಪಷ್ಟವಾಗಿ ಎದುರಿಗೆ ನಿಂತಿತ್ತು.

ದೀರ್ಘವಾಗಿ ಎಳೆದ ಸಿಗರೇಟನ್ನು ಬಿಸುಟಲು ಅತ್ತಿತ್ತ ನೋಡಿದ. ತನ್ನ ಮಗಳಂತಹುದೇ ಹೊಳೆವ ಕಣ್ಣುಗಳನ್ನು ಹೊಂದಿದ್ದ ಹೆಚ್ಚುಕಡಿಮೆ ಅದೇ ಪ್ರಾಯದ ಹುಡುಗಿ ಕೈ ಚಾಚಿ 'ಅಣಾ... ಮೂರ್ದಿಸದಿಂದ ಏನೂ ಉಂಡಿಲ್ಲ...' ಅಂತಾ ರಾಗವೆಳೆದಳು.

'ಮೂವತ್ತು ತಿಂಗಳಿಂದ ನೀನು ಉಂಡೇ ಇಲ್ಲ ಕಣಮ್ಮಿ...' ಅಂದ ಇಪ್ಪತ್ತು ರುಪಾಯಿ ನೋಟು ಕೊಡುತ್ತ ಕಣ್ತುಂಬಿಕೊಂಡು. ನದಿಯಂತಹ ಚರಂಡಿ ಪಕ್ಕದಲ್ಲಿ ಹರಿಯುತ್ತಿತ್ತು. ಮೆಗಾಸಿಟಿಯ ಅಷ್ಟೂ ಹೊಲಸು ಹರಿದು ಲಕ್ಷಾಂತರ ಮನೆಗಳಿಂದ ಹೊಲಸನ್ನು ಕಣ್ಣಿಗೆ ಕಾಣಿಸದಂತೆ ದಾಟಿಸಿ, ಇಲ್ಲಿ ಭೋರ್ಗರೆವ ನದಿಯಂತೆ ಕಾಣಿಸಿ ಹೇಸಿಗೆಯೆಬ್ಬಿಸಿತ್ತು.

'ನಾಜೀಮಾ... ವೊ ಭಾಯಿಸಾಬ್ ತುಜೆ ಪೈಸೆ ದೀ?' ಅನ್ನುತ್ತ ಆ ಹುಡುಗಿಯ ಕೇಳಿದ ಚಿಳ್ಳೆಪಳ್ಳೆ ಹುಡುಗರು ಅವನ ಮುತ್ತಿಕೊಂಡವು.

'ತೆಗ್‌ತಗೀರಿ... ನಮ್ಮ ಮಗಳಿಗೆ ಅಷ್ಟ್ ಚೆನಾಗಿರೋ ಹೆಸ್ರು ಇಟ್ರು... ನಾಜೀಮಾ ನಾಜೀಮಾ ಅಂತಾ ಸಾಬ್ರ ಹೆಸ್ರನ್ನೇ ಕರೀಬೇಡ್ರಿ...' ಅನ್ನುತ್ತಿದ್ದಳು ರಾಜಮ್ಮ ಪದೇ ಪದೇ. ಎಷ್ಟು ಜನ ನಾಜೀಮಾ... ಎಷ್ಟು ತರಹದ ಬದುಕು.

ಅವನ ಯೋಚನೆಯನ್ನು ಡಿಸ್ಟರ್ಬ್ ಮಾಡಿದ ಮೊಬೈಲ್ ಕರೆ ಅದೇ ಯೋಚನೆಯನ್ನು ಬಲವಾಗಿಸಿತು. ಬಂದದ್ದು ನಾಜೀಮಾ ಹೆಸರಿನದ್ದೇ ಕರೆ... ರಿಸೀವ್ ಮಾಡಿ ಕಿವಿಗಿಟ್ಟು ಹುಚ್ಚನಂತೆ ನಗುತ್ತಲೇ ಇದ್ದ.

'ಸರ್, ನನ್ನ ಮೊಬೈಲ್ ರಿಪೇರ್ ಆಯ್ತಾ? ಹಲೋ... ಹಲೋ... ಹಲೋ...' ಅನ್ನುತ್ತಲೇ ಇದ್ದಳು ಆ ಹುಡುಗಿ. ಎದುರಿನ ದೊಡ್ಡ ಫ್ಲೆಕ್ಸ್‌ನಲ್ಲಿ ನಾಜೀಮಾಳದ್ದೇ ಕಣ್ಣಿನ ಸುಂದರಿಯನ್ನೇ ದಿಟ್ಟಿಸುತ್ತ... 'ಹಲೋ.. ಅದರ ಇನ್‌ಬಿಲ್ಟ್ ಮೆಮೊರಿ ಚಿಪ್ ಹಾಳಾಗಿದೆ... ಹೊಸದು ಹಾಕಬೇಕು... ನೀವು ಶೋರೂಮ್ ಕಡೆಯಿಂದಲೇ ಮಾಡಿಸಿಕೊಳ್ಳಬೇಕಾಗುತ್ತೆ... ' ಅಂದ.


**ಇಂದ್ರಕುಮಾರ್ ಎಚ್.ಬಿ.**

ದಾವಣಗೆರೆಯಲ್ಲಿ ಶಿಕ್ಷಕ ವೃತ್ತಿಯಲ್ಲಿರುವ ಇಂದ್ರಕುಮಾರ್ ಕತೆ, ಕಾದಂಬರಿ, ಪ್ರಬಂಧಗಳನ್ನು ಬರೆದಿದ್ದಾರೆ. 'ಆ ಮುಖ', 'ನನ್ನ ನಿನ್ನ ನೆಂಟತನ', 'ಪರಮೂ ಪ್ರಪಂಚ', 'ಕಾಣದ ಕಡಲು' ಎಂಬ ಕಥಾಸಂಗ್ರಹಗಳನ್ನು, 'ಮೃದುಲಾ–ಆತ್ಮದ ಹಕ್ಕಿಯ ಹಾಡು', 'ಹುಲಿಕಾನು' ಎಂಬ ಕಾದಂಬರಿಗಳನ್ನು ಅವರು ಪ್ರಕಟಿಸಿದ್ದಾರೆ.